ಆ) ಈ ಯೋಜನೆಯಲ್ಲಿ 3.00 ಕಿಲೋಮೀಟರ್ ನಷ್ಟು ಬಾಗಶಃ ಕೆಲಸ ಆಗಿದೆ ಇದಕ್ಕೆ ರೂ. 73 ಲಕ್ಷ ಹಣ ಖರ್ಚಾಗಿದೆ.

ಇ) ಇನ್ನು 42 ಕಿಲೋಮೀಟರ್ ರಸ್ತೆ ಕೆಲಸ ಆಗಬೇಕಾಗಿದೆ ಇದಕ್ಕೆ ಸುಮಾರು ರೂ. 42.00 ಕೋಟಿ ಹಣದ ಅವಶ್ಯಕತೆ ಇದೆ.

ಈ) ಈ ರಸ್ತೆಯ ಕಾರ್ಯ ಮುಗಿಸಲು ಇನ್ನು 3 ವರ್ಷಗಳ ಕಾಲಾವಕಾಶ ನಿಗಧಿಪಡಿಸಿದೆ.

ಮೈಸೂರು ಕಲಾಮಂದಿರ ಮತ್ತು ವಿಶ್ವ ಕನ್ನಡ ಸಮೇಳನದ ಅತಿಥಿ ಗೃಹ ನೌಕರರ ಖಾಯಂ ಬಗ್ಗೆ

2101 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಮೈಸೂರು ಕಲಾಮಂದಿರ ಮತ್ತು ವಿಶ್ವ ಕನ್ನಡ ಸಮ್ಮೇಳನದ ಅತಿಥಿ ಗೃಹಗಳಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರೆಷ್ಟು

ಆ) ಎಷ್ಟು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದಾರೆ?

ಇ) ಈ ನೌಕರರನ್ನು ಖಾಯಂ ಮಾಡುವುದು ಯಾವಾಗ, ಇವರನ್ನು ಖಾಯಂಗೊಳಿಸಲು ಸರ್ವೋಚ್ಚ ನ್ಯಾಯಾಲಯಾದ ಆದೇಶ ಅನ್ವಯವಾಗುವುದಿಲ್ಲವೇ?

ಶ್ರೀ ಬಿ.ಟಿ. ಲಲಿತಾ ನಾಯಕ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಆ) 25 ಜನ.

ಆ) 7 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ.

ಇ) ಸರ್ವೋಚ್ಚ ನ್ಯಾಯಾಲಯವು ನೀಡಿದ ಆದೇಶದ ಅನ್ವಯ ಹೊರಡಿಸಿರುವ ದಿನಾಂಕ: 6.8.90ರ ಸರ್ಕಾರಿ ಆದೇಶ : ಡಿಪಿಎಆರ್ 2 ಎಸಎಲ್‌ಸಿ 90 ಇವರಿಗೆ ಅನ್ವಯವಾಗುವುದಿಲ್ಲ.

ಮೈಸೂರಿನಲ್ಲಿರುವ ಸಣ್ಣ ಪ್ರಮಾಣದ ಕೈಗಾರಿಕೆಗಳು

2104 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಸಣ್ಣ ಕೈಗಾರಿಕೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಮೈಸೂರಿನಲ್ಲಿರುವ ಸಣ್ಣ ಕೈಗಾರಿಕೆಗಳೆಷ್ಟು ಇವುಗಳಲ್ಲಿ ಎಷ್ಟು ಮುಚ್ಚಿವೆ.

ಆ) ಈ ಕೈಗಾರಿಕೆಗಳು ಮುಚ್ಚಿರಲು ಕಾರಣವೇನು?

ಇ) ಇವುಗಳನ್ನು ತೆರೆಯುವ ಬಗ್ಗೆ ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಎನ್.ಎಂ. ನಬಿ (ಸಣ್ಣ ಪ್ರಮಾಣದ ಕೈಗಾರಿಕೆಗಳ ಸಚಿವರು) :

ಅ) ಒಟ್ಟು ಸಣ್ಣ ಕೈಗಾರಿಕೆಗಳ ಸಂಖ್ಯೆ 15470
ಮುಚ್ಚಲ್ಪಟ್ಟಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ 2800

ಆ) ಈ ಕೆಳಕಂಡ ಕಾರಣಗಳಿಂದ ಕೈಗಾರಿಕೆಗಳು ಮುಚ್ಚಲ್ಪಟ್ಟಿವೆ :-

1) ದುಡಿಮೆ ಬಂಡವಾಳದ ಕೊರತೆ.

2) ಯೋಜನೆಯನ್ನು ಜಾರಿಗೊಳಿಸುವಲ್ಲಿ ಆದ ವಿಳಂಬ.

3) ವಿದ್ಯುಚ್ಛಕ್ತಿ ತೊಂದರೆ.

4) ಉದ್ಯಮೆಯು ಆಸಕ್ತಿ ವಹಿಸದೇ ಇರುವುದರಿಂದ

5) ಸರಿಯಾದ ತಾಂತ್ರಿಕ ಯೋಜನೆಯ ಅಭಾವದಿಂದ

6) ಸರಿಯಾದ ಆರ್ಥಿಕ ಯೋಜನೆಯ ಅಭಾವದಿಂದ.

7) ಕಾರ್ಮಿಕ ಸಮಸ್ಯೆಗಳು.

8) ಮೂಲಭೂತ ಸೌಲಭ್ಯಗಳ ತೊಂದರೆಗಳು.

9) ಆರ್ಥಿಕ ಮುಗ್ಗಟ್ಟು.

ಇ) ಮುಚ್ಚಿರುವ ಕೈಗಾರಿಕೆಗಳನ್ನು ತೆರೆಯಲು ಹಾಗೂ ಪುನಃ ಶ್ಚೇತನಕ್ಕಾಗಿ ರಾಜ್ಯದಲ್ಲಿ ಈಗಾಗಲೇ ಸಮಿತಿಯೊಂದಿದ್ದು, ಇದು 1988ರಿಂದ ಕಾರ್ಯ ನಿರ್ವಹಿಸುತ್ತಿದೆ. ಈ ಸಮಿತಿ ಪುನರಶ್ಚೇತನಗೊಳಿಸಬಹುದಾದಂತಹ 309 ಘಟಕಗಳಿಗೆ ಬೀಜಧನ ಸಾಲ ಮಂಜೂರಾತಿ ನೀಡಿದೆ.

1995-96ರಲ್ಲಿ ವರ್ಗಾವಣೆಯಾದ ಅಧಿಕಾರಿಗಳ ಸಂಖ್ಯೆ

2105 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ನಗರಾಭಿವೃದ್ಧಿ ಇಲಾಖೆಯಲ್ಲಿ ವರ್ಗಾವಣೆ ಮಾಡಲಾಗಿರುವ ಅಧಿಕಾರಿಗಳ ಸಂಖ್ಯೆ ಎಷ್ಟು?

ಆ) ಕೋರಿಕೆಯ ಮೇಲೆ ಆದ ವರ್ಗಾವಣೆ ಎಷ್ಟು? ಸರಕಾರ ಮಾಡಿರುವ ವರ್ಗಾವಣೆ ಎಷ್ಟು?

ಇ) ಇದರಿಂದ ಸರ್ಕಾರದ ಬೊಕ್ಕಸಕ್ಕೆ ಖರ್ಚಾದ ಹಣ ಎಷ್ಟು?

ಈ) ನಿವೃತ್ತಿಯ ಅಂಚಿನಲ್ಲಿರುವವರನ್ನು ವರ್ಗಾವಣೆ ಮಾಡಲಾಗಿದೆಯೇ? ಮಾಡಿದ್ದಲ್ಲಿ ಅದನ್ನು ರದ್ದುಪಡಿಸಲಾಗುವುದೆ?